ಸಂಖ್ಯೆಯನ್ನು ಅರವತ್ತ್ರೋ ಅರವತ್ತೈದರಿಂದಲೋ ಗುಣಿಸಿ ಅದು ರೂಪಾಯಿಯಲ್ಲಿ ಎಷ್ಟಾಯಿತು ಎಂದು ಎಷ್ಟೇ ಬಾರಿ ಲೆಕ್ಕ ಹಾಕಿದರೂ ಪ್ರತೀ ಬಾರಿಯೂ ಒಂದು ಸೊನ್ನೆ ಹೆಚ್ಚು ಕಡಿಮೆಯಾಗಿ... ಫುಲ್ ಕನ್‌ಫ್ಯೂಷನ್ನು!

ಅಂದಹಾಗೆ, ಹೆಸರು ನೋಡಿದರೆ ಇದೊಂದು ಹೋಟೆಲ್ಲೋ ಅಥವಾ ಬಟ್ಟೆ ಅಂಗಡಿಯೋ ಎಂದು ಗೊತ್ತಾಗದ ಈ ಬರಿಸ್ತಾ ಇದೆಯಲ್ಲ; ಅದೇ, ನಾನು ಮತ್ತು ಮೋ ಕಾಯಂ ಭೇಟಿಯಾಗುವ ಜಾಗ. ಅದೆಂದರೆ ನನಗೆ ಅದೇ ಹಳೆಯ ಪ್ರಾಬ್ಲೆಮ್ಮು. ಅದರಲ್ಲೂ, ಇಟಾಲಿಯನ್ ಭಾಷೆಯಲ್ಲಿ 'ಬರಿಸ್ತಾ' ಅಂದರೆ 'ಹೋಟೆಲಿನಲ್ಲಿ ಸರ್ವ್ ಮಾಡುವ ವೇಟರ್' ಎಂದು ಮೊ ಹೇಳಿದ ಮೇಲಂತೂ ನನಗೆ ಬರಿಸ್ತಾವೆಂದರೆ ಒಂಥರಾ ಮೇನಿಯಾ. ಮೊದಲನೇ ಬಾರಿ ಅಲ್ಲಿ ಹೋದಾಗಲಂತೂ ಅವನು ಅದೇನೋ 'ಕೆಚ ಪಚ' ಅನ್ನುವಂತೆ ಕೇಳುವ ವಸ್ತುವೊಂದನ್ನ ಆರ್ಡರ್ ಮಾಡಿ, 'ನಿನಗೇನು ಬೇಕು?' ಎಂದು ಕೇಳಿದ್ದ. ಏನು ಹೇಳಬೇಕೆಂದು ತಿಳಿಯದೇ ನಾನು ಗೊಂದಲಕ್ಕೊಳಗಾಗಿದ್ದೆ. ಅದಕ್ಕೂ ಮೊದಲು ಮೆನು ಕಾರ್ಡಿನ ಮೇಲೆ ಕಣ್ಣಾಡಿಸಿದ್ದ ನಾನು, ಅದರಲ್ಲಿಯ ಲಟ್ಟೆ ಮೋಚಾ ಮೊಜಿಟೋ ಅಫೋಗಟೋ ಇತ್ಯಾದಿ ಹೆಸರುಗಳನ್ನು ಓದಿ ಅವುಗಳೆಲ್ಲ ಏನಿರಬಹುದೆಂಬ ಊಹೆಯೂ ಸಾಧ್ಯವಾಗದೇ ಮೊದಲೇ ಕಕ್ಕಾಬಿಕ್ಕಿಯಾಗಿದ್ದೆ. ನಂತರ 'ನೀನು ತಗೊಂಡಿದ್ದೇ ನನಗೂ ಆಗಬಹುದು' ಎಂದು ಹೇಳಿ ಅರ್ಧಕಪ್ಪು ನೊರೆಯೇ ತುಂಬಿರುವ ಬಿಸಿ ದ್ರಾವಣವೊಂದನ್ನು ತುಟಿ ಬಾಯಿಗಳಿಗೆ ನೊರೆ ತಾಗದಂತೆ ಹರಸಾಹಸ ಮಾಡಿ ಕುಡಿಯುವಷ್ಟರಲ್ಲಿ ಸುಸ್ತಾಗಿದ್ದೆ.

**'ಇದೆನಯ್ಯ ಇದು?' ಎಂದೆ. 'ನಂದೊಂತರಾ ವಿಭಿನ್ನ style. ಎಲ್ಲೂ ಗೋಡೆಗಳಿರಕೂಡದು. ಮನದಲ್ಲೂ ಮನೆಯಲ್ಲೂ' ಎಂದು ಫಿಲಾಸಫಿಯ ಮಾತನಾಡಿದ.**

ಈತ ಪ್ರತೀ ಬಾರಿಯೂ ಭೇಟಿಗೆ ಈ ಸುಡುಗಾಡು ಹೋಟೆಲ್ಲಿಗೆ ಕರೆಯುವುದೇ ದೊಡ್ಡ ಫಜೀತಿ ನನಗೆ. ಸ್ವಲ್ಪ ರೂಢಿಯಾದರೂ ಆಗುತ್ತದೆಂದು ಅವನಿಲ್ಲದಾಗ ಮೂರ್ನಾಲ್ಕು ಬಾರಿ ನಾನಲ್ಲಿಗೆ ಹೋಗಿದ್ದೆ. ಒಬ್ಬನೇ ಹೋಗುವಾಗಲಂತೂ ನನಗೆ ಮತ್ತೂ ಸಮಸ್ಯೆಯೇ. ಮೊತ್ತ ಮೊದಲನೇಯದಾಗಿ ನಾನು ಕಾರಲ್ಲಲ್ಲ ಬೈಕಿನಲ್ಲಿ ಬಂದದ್ದು ಎಂಬುದು ಬರಿಸ್ತಾದ ಒಳಗಿರುವವರಿಗೆ ಗೊತ್ತಾಗಕೂಡದೆಂದು ಬೈಕನ್ನು ಹತ್ತು ಫರ್ಲಾಂಗು ದೂರದಲ್ಲಿಯೇ ಪಾರ್ಕ್ ಮಾಡಿ ನಡೆದು ಹೋಗುತ್ತಿದ್ದೆ. ಮೆನು ಕಾರ್ಡ್ ನೋಡುತ್ತಿರುವವನಂತೆ ನಾಟಕವಾಡುತ್ತ, ವೇಟರ್ ನನ್ನಡೆಗೆ ಬರುವುದರೊಳಗೆ ಪಕ್ಕದ ಗಾಜಿನ ಕೌಂಟರಿನ ಒಳಗೆ ಇಟ್ಟಿರುವ ತಿಂಡಿಗಳಲ್ಲಿ ಯಾವುದಾದರೂ ಒಂದನ್ನು ನಾನು ಗುರುತಿಸಿ ಹೆಸರು ಹೇಳಲು ಸಾಧ್ಯವೋ ಎಂದು ಕಣ್ಣಾಡಿಸುತ್ತಿದ್ದೆ. ಅದೂ ಸಾಧ್ಯವಾದಾಗ ಮೆನು ಕಾರ್ಡಿನಲ್ಲೇ ಒಂದು ಐಟಮ್ಮನ್ನು ವೇಟರನಿಗೆ ಬೆರಳಿನಿಂದ ತೋರಿಸಿ ಆತ ತಂದುಕೊಟ್ಟಿದ್ದನ್ನು ಕುಡಿದು, ತಿಂದು ಬರುತ್ತಿದ್ದೆ. ಪ್ರತೀ ಬಾರಿಯೂ ಆತ ತಂದುಕೊಡುವವರೆಗೂ ಕುಡಿಯುವುದನ್ನು ತರುತ್ತಾನೋ ತಿನ್ನುವುದನ್ನು ತರುತ್ತಾನೋ ಎಂಬ ಕುತೂಹಲವಿರುತ್ತಿತ್ತು ನನಗೆ.